ಸರಿಯಾಗಿಯೇ ಇತ್ತು. ಚಾರ್ಜ್ ಕೂಡ ಇತ್ತು. ಮಡದಿಗೆ ಫೋನಾಯಿಸಿದರು. ರಿಂಗ್ ಆಯಿತು. ಉತ್ತರಕ್ಕಾಗಿ ಕಾದರು. ಪ್ರತ್ಯುತ್ತರ ಬರಲಿಲ್ಲ. ಬಹುಶಃ ಮಲಗಿರಬೇಕು. ಇನ್ನೂ ಬೆಳಗಿನ ಜಾವ ಮೂರು ಗಂಟೆ! ಮಲಗಲಿ! ಹೇಗೂ ತಾನೇ ಹೋಗುತ್ತಿರುವೆನಲ್ಲ? ಆದರೆ, ಎಂತಹ ಸ್ಥಿತಿಯಲ್ಲಿ? ಹೇಗೋ ಅಂತೂ ಬದುಕಿ ಉಳಿದಿರುವೆನಲ್ಲ... ದೇವರು ದೊಡ್ಡವನು. ಅಂತಹ ಅಪಘಾತದಲ್ಲಿ ಬದುಕಿ ಉಳಿದವನು ಬಹುಶಃ ನಾನೊಬ್ಬನೇ ಇರಬೇಕು!

ಬಸ್ಸಿನಲ್ಲಿ ಬಹಳ ಜನರಿರಲಿಲ್ಲ. ಇಪ್ಪತ್ತು ಜನರಿದ್ದರೆ ಹೆಚ್ಚು. ವಿಮಾನದಲ್ಲಿ ಬರುವ ಬಹುತೇಕ ಪ್ರಯಾಣಿಕರ ಸಂಬಂಧಿಗಳು ಕಾರುಗಳಲ್ಲಿ ಬಂದು ತಮ್ಮವರನ್ನು ಕರೆದುಕೊಂಡು ಹೋಗುತ್ತಾರೆ. ಇನ್ನು ಕೆಲವರು ಟ್ಯಾಕ್ಸಿ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ದೇವರಾಜು ಸಾರಿಗೆ ಇಲಾಖೆಯ ಏರ್‌ಪೋರ್ಟ್ ಬಸ್ಸನ್ನೇ ಉಪಯೋಗಿಸಿದ್ದರು.

ಏರ್‌ಪೋರ್ಟ್‌ನ ರಸ್ತೆ ಹೆಚ್ಚೂಕಡಿಮೆ ನಿರ್ಜನವಾಗಿತ್ತು. ಆ ಸಮಯದಲ್ಲಿ ಅಂತರರಾಷ್ಟ್ರೀಯ ವಿಮಾನಗಳು ಬಂದಿಳಿಯುವುದು ಹೆಚ್ಚು. ಹೆಚ್ಚಿನ ಟ್ಯಾಕ್ಸಿ, ಕಾರುಗಳು ಏರ್‌ಪೋರ್ಟಿನ ಕಡೆಗೆ ಹೋಗುತ್ತಿದ್ದವು. ಬೆಂಗಳೂರಿನ ಕಡೆಗೆ ಹೋಗುತ್ತಿದ್ದ ವಾಹನಗಳು ಕಡಿಮೆ. ಬಸ್ಸು ತುಂಬ ವೇಗವಾಗಿ ದಾರಿಯನ್ನು ಕ್ರಮಿಸುತ್ತಿತ್ತು. ದೇವರಾಜು ಈಗ ಸ್ವಲ್ಪ ಸಮಾಧಾನಗೊಂಡಿದ್ದರು. ಎಲ್ಲ ಆತಂಕವೂ ಕೊನೆಯಾಗಿತ್ತು. ಇನ್ನೇನು ಹೆಚ್ಚೆಂದರೆ ಅರ್ಧ ಗಂಟೆಯಲ್ಲಿ ಮನೆಯಲ್ಲಿರುತ್ತೇನೆ ಎಂದು ವಾಚು ನೋಡಿಕೊಂಡರು ದೇವರಾಜು. ತಾವು ಇಳಿಯಬೇಕಾಗಿದ್ದ ಸ್ಟಾಪು ಹತ್ತಿರವಾಗುತ್ತಿತ್ತು. ಅಲ್ಲಿ ಬಸ್ಸು ನಿಲ್ಲುವುದೋ ಇಲ್ಲವೋ? ದೇವರಾಜು ಎದ್ದು ಹೋಗಿ ಮುಂದಿನ ಸ್ಟಾಪಿನಲ್ಲಿ ನಿಲ್ಲಿಸಿ ಎಂದು ಕಂಡಕ್ಟರ್‌ಗೆ ಹೇಳಿದರು. ಕಂಡಕ್ಟರ್ ಯಾವುದೇ ಪ್ರತಿಕ್ರಿಯೆ ತೋರಿಸಲಿಲ್ಲ. ಆದರೆ ಅದು ಅರ್ಥವಾಗಿದೆಯೆಂಬಂತೆ ಮುಖಭಾವ ಮಾಡಿದ್ದ.

**'ಯಾವುದೂ ನಮ್ಮ ಕೈಯಲಿಲ್ಲ! ಅವರು ಜರ್ಮನಿಗೇ ಹೋಗಿದ್ದಕ್ಕೇ ಹೀಗಾಗಿದೆ ಅಂತ ಹೇಳೋಕಾಗೊಲ್ಲ. ನಿನ್ನೆ ರಾತ್ರಿ ಅಪಾರ್ಟ್‌ಮೆಂಟು ಕುಸಿದು ನೂರಿಪ್ಪತ್ತು ಜನ ಸತ್ತಿದ್ದಾರೆ! ಸಾವು ನಮ್ಮ ಕೈಲಿಲ್ಲ!' ಡಿಪಾರ್ಟ್‌ಮೆಂಟ್ ಬಾಸು ಹೇಳುತ್ತಿದ್ದರು...**

ದೇವರಾಜು ಇಳಿಯಬೇಕಾಗಿದ್ದ ನಿಲ್ದಾಣವೂ ಬಂತು. ಬಸ್ಸು ನಿಲ್ಲುವ ಸೂಚನೆಯೇ ಕಾಣಲಿಲ್ಲ! 'ಹಲೋ ಸ್ಟಾಪ್ ಪ್ಲೀಸ್...' ದೇವರಾಜು ಕೂಗಿದರು. ಬಸ್ಸು ನಿಂತಿತು. ಕೇವಲ ಒಂದೇ ಕ್ಷಣ! ದೇವರಾಜು ಇಳಿಯುವ ಮುಂಚೆಯೇ ಬಸ್ಸು ವೇಗವಾಗಿ ಚಲಿಸಿತು! ದೇವರಾಜು ಬಸ್ಸಿನಿಂದ ಹಾರಿದರು! ಕೋಪ ಉಕ್ಕೇರಿತು! 'ಪಾಪಿ! ಸಾವನ್ನು ತಪ್ಪಿಸಿಕೊಂಡು ಬಂದಿದ್ದೀನಿ! ಈಗ ನನ್ನನ್ನು ಸಾಯಿಸಬೇಕೂ ಅಂತಿದ್ದೀಯ!' ಎಂದು ಕೂಗಿದರು. ಆದರೆ, ಅವರ ಮಾತು ಮಳೆ ನೀರಿನಲ್ಲಿ ಕರಗಿತ್ತು!

ಮಳೆ ಸ್ವಲ್ಪ ಕಡಿಮೆಯಾಗುತ್ತಿತ್ತು. ಹತ್ತು ನಿಮಿಷ ನಡೆದರೆ ಮನೆ. ಈ ಅವತಾರದಲ್ಲಿ